**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಎನ್.ರವಿಕುಮಾರ್, ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಶ್ರೀ ಕೆ.ಎಸ್ ನವೀನ್ ರವರುಗಳು ನಿಯಮ 330 ರ ಗಮನ ಸೆಳೆದ ಸೂಚನೆ ಉತ್ತರಿಸುವ ಬಗ್ಗೆ.**

**ಪ್ರಶ್ನೆ:** ಲಿವರ್ ಸಿರೋಸಿಸ್/ ಜಾಂಡೀಸ್ ಎಂಬ ಪಿತ್ತಕೋಶದ ಖಾಯಿಲೆಯಿಂದ ರಾಜ್ಯಾದ್ಯಂತ ಕುಡುಕರು ಬಳಲುತ್ತಿದ್ದು ಈ ಖಾಯಿಲೆಯು ಹಲವಾರು ಕುಡುಕರ ಸಾವಿಗೂ ಕಾರಣವಾಗಿದೆ. ಈ ಮೂಲಕ ರಾಜ್ಯದ ಅಬಕಾರಿ ಆದಾಯದ ಕುಸಿತವು ಅಚ್ಚರಿ ಎನ್ನುವಂತಿದೆ. 2025 ಸಪ್ಟೆಂಬರ್ ತಿಂಗಳ ಅಂತ್ಯದಲ್ಲಿ ಬಿಯರ್ ಮಾರಾಟವು 242.73 ಲಕ್ಷ ಬಾಕ್ಸ್ ನಿಂದ 195.27 ಬಾಕ್ಸ್ ಆಗಿರುವುದು ಒಟ್ಟು ಮಾರಾಟದ 20% ಕುಸಿತ ಕಂಡಂತಾಗಿದೆ. ಈ ಎಲ್ಲಾ ಅಂಶಗಳ ಕುರಿತು ಹಾಗು ಕುಡುಕರ ದೀರ್ಘ ಆಯುಷ್ಯ ಮತ್ತು ಉತ್ತಮ ಆರೋಗ್ಯ ಹಾಗು ಕುಡಿತದಿಂದ ಮಾತ್ರವೇ ಬರುವಂತಹಾ ಲಿವರ್ ಸಿರೋಸಿಸ್/ ಜಾಂಡೀಸ್ ಎಂಬ ಪಿತ್ತಕೋಶದ ಖಾಯಿಲೆ ಅದಕ್ಕೆ ಪರಿಹಾರ ಮತ್ತು ಚಿಕಿತ್ಸೆಗೆ ಅಬಕಾರಿ ಇಲಾಖೆಯ ಆದಾಯದ ಕನಿಷ್ಠ 20% ಮೊತ್ತವನ್ನು ಕುಡುಕರ ದೀರ್ಘಾಯಷ್ಯ ಹಾಗು ಅರೋಗ್ಯ ಮತ್ತು ಉತ್ತಮ ಚಿಕಿತ್ಸೆಗಾಗಿ ವಿನಿಯೋಗಿಸುವ ಕುರಿತು ಚರ್ಚಿಸಲು ಅವಕಾಶ ನೀಡುವಂತೆ ವಿನಂತಿಸುತ್ತೇನೆ.

**ಉತ್ತರ:**

ಅಬಕಾರಿ ಇಲಾಖೆಯಲ್ಲಿ ಕಳೆದ 3 ವರ್ಷಗಳಲ್ಲಿ ಏಪ್ರಿಲ್ ನಿಂದ ಸೆಪ್ಟಂಬರ್ ಅಂತ್ಯದವರೆಗೆ ಮಾರಾಟವಾದ ಬಿಯರ್ ಮತ್ತು ಸಂಗ್ರಹವಾದ ಅಬಕಾರಿ ರಾಜಸ್ವದ ವಿವರಗಳು ಈ ಕೆಳಕಂಡಂತಿವೆ.

| ವರ್ಷ | ಏಪ್ರಿಲ್ ನಿಂದ ಸೆಪ್ಟಂಬರ್ ವರೆಗೆ ಬಿಯರ್ ಮಾರಾಟ | | | | |
|---|---|---|---|---|---|
| | 2023 | 2024 | 2025 | ವ್ಯತ್ಯಾಸ (ಕಳೆದ ವರ್ಷಕ್ಕೆ ಹೋಲಿಸಿದಲ್ಲಿ) | ಶೇಕಡವಾರು ಬೆಳವಣಿಗೆ |
| ಬಿಯರ್ ಮಾರಾಟ (ಲಕ್ಷ ಪೆಟ್ಟಿಗೆಗಳಲ್ಲಿ) | 211.25 | 242.73 | 195.27 | -47.46 | -19.55% |
| ಬಿಯರ್ ಮಾರಾಟದಿಂದ ಸಂಗ್ರಹವಾದ ಅಬಕಾರಿ ರಾಜಸ್ವ (ರೂ.ಕೋಟಿಗಳಲ್ಲಿ) | 2,520.15 | 3,002.10 | 2,805.51 | -196.59 | -6.55% |

2025-26ನೇ ಆರ್ಥಿಕ ಸಾಲಿನಲ್ಲಿ ಏಪ್ರಿಲ್ 2025 ರಿಂದ ಸೆಪ್ಟೆಂಬರ್ 2025 ಅಂತ್ಯದವರೆಗೆ 195.27 ಲಕ್ಷ ಪೆಟ್ಟಿಗೆಗಳು ಬಿಯರ್ ಮಾರಾಟ ಮಾಡಲಾಗಿದ್ದು, ಇದು ಕಳೆದ ಇದೇ ಅವಧಿಗೆ ಹೋಲಿಸಿದಲ್ಲಿ - 47.46 ಲಕ್ಷ ಪೆಟ್ಟಿಗೆಗಳು ಕಡಿಮೆ ಮಾರಾಟವಾಗಿ, ಶೇ.19.55 ಋಣಾತ್ಮಕ ಬೆಳವಣಿಗೆಯಾಗಿರುತ್ತದೆ. ಪ್ರಸ್ತುತ ಸಾಲಿನಲ್ಲಿ ಬಿಯರ್ ಮಾರಾಟವು ಕಡಿಮೆ ಮಾರಾಟವಾಗುತ್ತಿದ್ದು, ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಆಗಿದ್ದು, ಅಲ್ಲದೇ ಶೀತ ವಾತಾವರಣ ಇರುವುದರಿಂದ ಬಿಯರ್ ಮಾರಾಟದಲ್ಲಿ ಕುಸಿತ ಉಂಟಾಗಿರುವುದಕ್ಕೆ ಪ್ರಮುಖ ಕಾರಣವಾಗಿರುತ್ತದೆ.

ಅಬಕಾರಿ ಇಲಾಖೆಯಿಂದ ಸಂಗ್ರಹವಾಗುವ ಅಬಕಾರಿ ಆದಾಯವನ್ನು ರಾಜ್ಯದ ಸಂಚಿತ ನಿಧಿಗೆ ಜಮೆಗೊಳಿಸಿ ಆಯವ್ಯದಲ್ಲಿ ಅನುಮೋಸಿಲ್ಪಟಿರುವ ಕಾರ್ಯಕ್ರಮಗಳಿಗೆ ವೆಚ್ಚಗೊಳಿಸುತ್ತಿದೆ. ಯಾವುದಾದರೂ ಒಂದು ಇಲಖೆಯಿಂದ ಸಂಚಿತ ನಿಧಿಗೆ ಜಮೆಯಾಗಿರುವ ಅನುದಾನವನ್ನು ಯಾವುದೇ ಒಂದು ಉದ್ದೇಶಕ್ಕಾಗಿ ವೆಚ್ಚಗೊಳಿಸುವ ಪದ್ಧತಿ ಯನ್ನು ಜಾರಿಯಲ್ಲಿರುವುದಿಲ್ಲ. ಆದರಿಂದ ಸದರಿ ಕೋರಿಕೆಯಂತೆ ಕ್ರಮ ವಹಿಸಲು ಅವಕಾಶ ಇರುವುದಿಲ್ಲ.

ಅಬಕಾರಿ ಇಲಾಖೆಯಿಂದ ಸಂಗ್ರಹವಾಗುವ ಅಬಕಾರಿ ಆದಾಗ್ಯೂ, ರಾಜ್ಯದ ಜನರ ಸರ್ವಾಂಗೀಣ ಆರೋಗ್ಯ ಮತ್ತು ಚಿಕಿತ್ಸಗಾಗಿ ರಾಜ್ಯ ಸರ್ಕಾರದಿಂದ ಹಲವಾರು ಉಪ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಮತ್ತು ನ್ಯಾಷನಲ್ ಹೆಲ್ತ್ ಮಿಷನ್ ಮುಂತಾದ ಯೋಜನೆಗಳಡಿ ರಾಜ್ಯದ ಸಾರ್ವಜನಿಕರಿಗೆ ಸಾರ್ವಜನಿಕ ಆರೋಗ್ಯ ಕೇಂದ್ರಗಳು ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಮೂಲಕ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಇದಕ್ಕಾಗಿ ಆಯ್ಯವ್ಯಯದಲ್ಲಿ ಅಗತ್ಯ ಅನುದಾನವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಗಳ ಬೇಡಿಕೆಯಡಿ ಒದಗಿಸಲಾಗುತ್ತಿದೆ.

**ಆಇ 118 ಇಎಲ್‌ಕ್ಯೂ 2025**

(ಆರ್.ಬಿ.ತಿಮ್ಮಾಪುರ)

ಅಬಕಾರಿ ಸಚಿವರು